ಒ.ಎಸ್. - 49/2024
ಪಿ.ಡಬ್ಲ್ಯು. - 01

**ದಿನಾಂಕ 04-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ನೇ ಪ್ರತಿವಾದಿಯವರ ಪರ ವಕೀಲರಿಂದಃ**

ನಿಕ್ಲಮ್ ಫೆರ್ನಾಂಡಿಸ್ ರವರ ಪರಿಚಯ ಇಲ್ಲ. ನಿಕ್ಲಮ್ ಫೆರ್ನಾಂಡಿಸ್ ರವರು ದಿ. 17-04-1959 ರಂದು ಒಂದು ಚಾಲಗೇಣಿ ಸೋಡ ಚೀಟಿಯನ್ನು ನನ್ನ ತಂದೆ ಹೆಸರಿಗೆ ಬರೆದುಕೊಟ್ಟಿದ್ದ ದಾಖಲೆ ನನ್ನ ಬಳಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಒಂದನೇ ಪ್ರತಿವಾದಿ ಕುಂದಾಪುರದ ಸಿವಿಲ್ ನ್ಯಾಯಾಲಯದಲ್ಲಿ OS No.09/2010 ದಾವೆಯನ್ನು ನನ್ನ ವಿರುದ್ಧ ಹಾಕಿದ್ದು ಸದ್ರಿ ದಾವೆಯಲ್ಲಿ ನಾನು ಈಗ ಮೇಲೆ ಹೇಳಿದ ವಿಚಾರವನ್ನು ಹೇಳಲಿಲ್ಲ. ನಿಕ್ಲಮ್ ಫೆರ್ನಾಂಡಿಸ್ ಎಂಬ ವ್ಯಕ್ತಿ ಆ ಊರಿನಲ್ಲೇ ಇಲ್ಲ ಮತ್ತು ಅವರು ದಾವಾ ಸ್ವತ್ತಿಗಾಗಲೀ ಅಥವಾ ಬೇರೆ ಯಾವುದೇ ಸ್ಥಿರಾಸ್ತಿಗಳಿಗಾಗಲೀ ಗೇಣಿದಾರನಾಗಿರುವುದಿಲ್ಲ ಎಂದರೆ ಸರಿಯಲ್ಲ . ಅದೇ ರೀತಿ ನನ್ನ ತಂದೆ ಹೆಸರಿಗೆ ಚಾಲಗೇಣಿ ಸೋಡ ಚೀಟಿಯನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ . ಈ ದಾವೆಯಲ್ಲಿ ಲೇವಿ ರಿಜಿಸ್ಟರ್ ನ್ನು ಹಾಜರುಪಡಿಸಿದ್ದು ಅದರಲ್ಲಿ ದಾವಾ ಸ್ವತ್ತುವಿನ ಸರ್ವೇ ನಂಬರ್ ಇಲ್ಲ ಎಂದರೆ ಸರಿಯಲ್ಲ. ಸದ್ರಿ ದಾಖಲೆಗಳನ್ನು ದಾವೆಗಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ . 1967 ರಿಂದ ದಾವಾ ಬಿ ಶೆಡ್ಯೂಲ್ ಸ್ವತ್ತನ್ನು ರಾಮ ಬಿಲ್ಲವ ಎನ್ನುವವರು ಚಾಲಗೇಣಿದಾರರಾಗಿ ಸ್ವಾಧೀನ ಹೊಂದಿದ್ದರು ಎಂದರೆ ಸರಿಯಲ್ಲ . ಅದೇ ರೀತಿ ರಾಮ ಬಿಲ್ಲವ ರವರ ಕಾಲದ ನಂತರ ಅವರ ತಂಗಿ ಚಂದು ಪೂಜಾರ್ತಿ ಮತ್ತು ಅವರ ಮಗ 1 ನೇ ಪ್ರತಿವಾದಿ ಸ್ವಾಧೀನವನ್ನು ಹೊಂದಿ ವ್ಯವಸಾಯ ಮಾಡುತಿದ್ದರು ಎಂದರೆ ಸರಿಯಲ್ಲ . ನನ್ನ ತಂದೆ ಭೂ ನ್ಯಾಯಮಂಡಳಿಯ ಮುಂದೆ ರಾಮ ಬಿಲ್ಲವ ರವರನ್ನು ಅರ್ಜಿ ಹಾಕಲು ಬಿಡಲಿಲ್ಲ ಎಂದರೆ ಸರಿಯಲ್ಲ . 1967 ರಿಂದ ರಾಮ ಬಿಲ್ಲವ ನೇ ಸ್ವಾಧೀನ ಹೊಂದಿದ್ದರಿಂದ ನನ್ನ ತಂದೆ ಬರೆದ ಮೇಲೆ ಹೇಳಿದ ವೀಲುನಾಮೆಯಲ್ಲಿ ದಾವಾ ಬಿ ಶೆಡ್ಯೂಲ್ ಸ್ವತ್ತನ್ನು ಸೇರಿಸಲಿಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರಿದು ಈ ಜಾಗದ ಜೊತೆ ಮತ್ತೆ ಬೇರೆ ಜಾಗವನ್ನು ಸೇರಿಸಿಲ್ಲ ಎಂದು ತಿಳಿಸಿರುತ್ತಾರೆ. 1967 ರಿಂದ ರಾಮ ಬಿಲ್ಲವ ರವರು ಚಾಲಗೇಣಿದಾರರಾಗಿ ಬಿ ಶೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನ ಹೊಂದಿರುವುದರಿಂದ ನನ್ನ ತಂದೆ ಹಕ್ಕನ್ನು ಕಳೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. OS No.9/2010 ರಲ್ಲಿ ನನ್ನ ತಮ್ಮ ಮನೋಜ್ ಕೂಡ ಪಕ್ಷಗಾರರು ಎಂದರೆ ಸರಿ . ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಲು ತೊಂದರೆ ಇಲ್ಲ . ಅಸಲು ದಾವಾ ಸಂಖ್ಯೆ 9/2010 ಡಿಕ್ರಿಯಾಗಿದ್ದು ಸದ್ರಿ ಡಿಕ್ರಿ ನನ್ನ ತಮ್ಮ ಮನೋಜ್‌ಗೂ ಬದ್ಧಪಡುತ್ತದೆ ಎಂದರೆ ಸರಿಯಲ್ಲ . ನಾನು ಹಾಜರುಪಡಿಸಿರುವ ದಾಖಲೆಗೂ ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ನಾನು ಅವುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವ ರೀತಿ ನನ್ನ ತಂದೆಯಾಗಲೀ ಅಥವಾ ನಾನಾಗಲೀ ದಾವಾ ಬಿ ಶೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನ ಹೊಂದಿ ಬೇಸಾಯ ಮಾಡುತ್ತಿಲ್ಲಎಂದರೆ ಸರಿಯಲ್ಲ . ದಾವಾ ಸ್ವತ್ತು ವಿನಲ್ಲಿ 1 ನೇ ಪ್ರತಿವಾದಿ ಬೇಸಾಯ ಮಾಡುವುದರಿಂದ ನಾನು ಕೇಳುವ ರೀತಿ ಲಾಭಾಂಶ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರಿದು ದಾವಾ ಸ್ವತ್ತು ನನ್ನ ಸ್ವಾಧೀನದಲ್ಲಿಯೇ ಇರುತ್ತದೆ ಎಂದು ತಿಳಿಸಿರುತ್ತಾರೆ . ದಾವೆಯ ಮುಖ್ಯವಿಚಾರಣೆಯಲ್ಲಿ ಹೇಳಿದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. 25 ವರ್ಷದ ನಂತರ ನಾನು ವ್ಯಾಜ್ಯ ಹಾಕಿರುವುದರಿಂದ ಅದು ಕಾಲಮಿತಿ ಪರಿಧಿಯಲ್ಲಿ ವಿಳಂಭವಾಗುದರಿಂದ ನಾನು ಯಾವುದೇ ಹಕ್ಕು ಪಡೆಯಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

ಒ.ಎಸ್.  - 49/2024

ಪಿ.ಡಬ್ಲ್ಯು. - 01

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.